ಡಿ.ಎಸ್. ಪಂಕಜಸುಬ್ರಮಣ್ಯ, ಬೆಂಗಳೂರು
*ರಾಜಕಾರಣಿಗಳಿಗೆ ವಯಸ್ಸು ಮತ್ತು ವಿದ್ಯೆಯನ್ನು ಏಕೆ ನಿಗದಿಪಡಿಸುವುದಿಲ್ಲ?*




ಅವರೇ ನಿಗದಿಪಡಿಸಿಕೊಂಡಿದ್ದಾರಲ್ಲಾ... ಮುದಿಗೂಬೆಯ ವಯಸ್ಸು, ಕೋತಿವಿದ್ಯೆ!

ಕಾಡನೂರು ರಾಮಶೇಷ, ಹುಲಿಮಂಗಲ
*ಬಿಗ್ ಬಾಸ್ ಮನೆಯಲ್ಲಿ ವಾಸಿಸಲು ನಿಮಗೆ ಆಹ್ವಾನ ಬಂದರೆ?*
ಕ್ಷಮಿಸಿ. ನಾನು ರಿಂಗ್ ಮಾಸ್ಟರ್ ಹೇಳಿದಂತೆ ಕೇಳುವ ಬಫೂನ್ ಅಲ್ಲ.

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ
*ಅರಿತರೆ ಪ್ರೇಮ, ಬೆರೆತರೆ ಪ್ರಣಯ, ಮುನಿದರೆ ವಿರಸ. ಸುಮ್ಮನಿದ್ದರೆ?*
ಜಗತ್ತಿಗೇ ಶಾಂತಿ!

ಕೆ.ವಿ. ಶಿವಕುಮಾರ್ ಕಾಳೀಹುಂಡಿ, ಮೈಸೂರು
*ನಕ್ಕರೂ ಸ್ವರ್ಗ ಸಿಗುತ್ತಿಲ್ಲವಲ್ಲಾ...?*
ಬರಿದೇ ನೀವು ನಕ್ಕರೆ ಸಾಲದು, ನರ್ಸಿಂಗ್ ಹೋಂನವರೂ ತೃಪ್ತಿಯಿಂದ ನಕ್ಕಂದು ನಿಮಗೆ ಸ್ವರ್ಗ ಪ್ರಾಪ್ತಿ!

ಪ್ರದ್ಯುಮ್ನ ಪಿ.ಬಿ. ದಾವಣಗೆರೆ
*ತುಂಬಿದ ಕೊಡ ತುಳುಕುವುದಿಲ್ಲ. ತುಂಬಿದ ನಡು?*



ಬಳುಕುವುದಿಲ್ಲ!

ಸಾವಿತ್ರಮ್ಮ ಕೆ. ವಿಭೂತಿ, ಹರಿಹರ
*ಕೈ ಕೆಸರಾಗದೆ ಬಾಯಿ ಮೊಸರಾಗುವ ಯಾವುದಾದರೂ ಉಪಾಯ ನಿಮ್ಮಲ್ಲಿ ಉಂಟಾ?*
ಮೊದಲು ಮೊಸರನ್ನು ಒಂದು ತಟ್ಟೆಯಲ್ಲಿ ಸುರಿಯಿರಿ. ನಂತರ ಕೈಗಳೆರಡನ್ನೂ ಹಿಂದಕ್ಕೆ ಕಟ್ಟಿಕೊಂಡು, ಆ ತಟ್ಟೆಯ ನೇರಕ್ಕೆ ನಿಮ್ಮ ಮುಖ ಬರುವಂತೆ ನೋಡಿಕೊಂಡು ಧಬಾರ್ ಎಂದು ಬೀಳಿ. ಕೈ ಕೆಸರಾಗದೆಯೇ ಬಾಯಿ ಮೊಸರು!

ರೆಮಿತ್ ಸಿಕ್ವೇರಾ, ಹೊಸನಗರ
*ಅತ್ಯಾಚಾರಗಳಿಗೆ ಕೊನೆ ಎಂದು?*
ಗಂಡು ರೂಪಕ್ಕಿಂತಲೂ ಗುಣಕ್ಕೆ ಪ್ರಾಧಾನ್ಯತೆ ನೀಡಲು ಆರಂಭಿಸಿದಂದು!

ಸಿ. ಅನಂತರಾವ್ ಹಿರೇಹಳ್ಳಿ, ಭರಮಸಾಗರ
*ಬಿಗ್‌ಬಾಸ್‌ನಲ್ಲಿ ಬಿಗ್ ಯಾರು, ಬಾಸ್ ಯಾರು?*
ಬಾಸ್ ಯಾರಾದರೂ ಇರಲಿ, ಬಾಯಿ, ಆಕಾರದ ವಿಷಯದಲ್ಲಿ ಬ್ರಹ್ಮಾಂಡಿಯೇ ಬಿಗ್.

ಚನ್ನಬಸವ ಪುತ್ತೂರ್ಕರ, ಚಿತ್ರದುರ್ಗ
*ರಾಮ್‌ಜೀ, ಪ್ರಶ್ನೆಗಿಂತಲೂ ನೀವು ಕೊಡುವ ಉತ್ತರವೇ ಮಜಬೂತಾಗಿರುವ ಗುಟ್ಟು?*
ಪ್ರಶ್ನೆಯೆಂಬ ಬೂತದಲ್ಲೇ ಅಡಗಿರುವ ಮಜ!

ಜಯದೇವ ಹಲಕಿ, ಗೋಕಾಕ ಫಾಲ್ಸ್
*ದೇವರು ಇದ್ದಾನೆಯೇ?*
ಇದ್ದಿದ್ದರೆ ಭಕ್ತರು ಬಿಡುತ್ತಿದ್ದರೇನು? ದೇವ ಎಂಬುದು ಒಂದು ಸುಂದರ, ಅವಶ್ಯ ಕಲ್ಪನೆಯಷ್ಟೆ.

ಎಸ್.ಎನ್.ಮಹಾಬಲರಾವ್, ಎನ್‌ಆರ್‌ಪುರ
*ಹುಡುಗಿ ನೋಡಲು ಹೋದಾಗ ಕಿರುನಗೆ ಬೀರಿದಳು...?*
ಹೌದೇ? ಮೊನ್ನೆ ಝೂನಲ್ಲಿ ಚಿಂಪಾಂಜಿಯನ್ನು ನೋಡಿದಾಗಲೂ ಹಾಗೇ ಮಾಡಿದ್ದಳು!

ಪಿ.ಎನ್. ಶ್ರೀವತ್ಸ, ಬೆಂಗಳೂರು
*ರಾಜ್ಯದಲ್ಲಿ ಬಿಜೆಪಿ ಮತ್ತೆ ಅಧಿಕಾರಕ್ಕೆ ಬರುವುದು ಕನಸಿನ ಮಾತಲ್ಲವೇ?*
ಅಲ್ಲ, ದುಃಸ್ವಪ್ನದ ಮಾತು!

ಬಿ. ಚಂದ್ರೇಗೌಡ, ಬೆಂಗಳೂರು
*ಹೆಸರಿನಲ್ಲೇನಿದೆ?*
ಏನೇನೂ ಇಲ್ಲ; ವಾಸ್ತವವಾಗಿ ಹೆಸರು ಒಂದು ರೋಗ. ಅದು ವಾಸಿಯಾದಾಗಲೇ ಜನ ಖ್ಯಾತ (ಹೆಸರುವಾಸಿ) ರಾಗುವುದು!

ಓಂ ಚನ್ನೇಶ್, ಅರಬೀಳಚಿ ಕ್ಯಾಂಪ್
*ಇಲ್ಲೊಬ್ಬಳು ನನ್ನನ್ನು ನೋಡಿದ ಕೂಡಲೆ ಚಳಿಚಳಿ ತಾಳೆನು ಈ ಚಳಿಯ ಅಂತ ಹಾಡ್ತಾಳಲ್ಲಾ...?*
ಅವಳು ಡ್ರೈಕ್ಲೀನ್ ಮಾಡಿಸ್ಕೊಡಿ ಅಂತ ಕೊಟ್ಟ ಕೋಟು, ಸ್ವೆಟರು ನೀವೇ ಇಟ್ಕೊಂಡ್ಬಿಟ್ರೆ ಇನ್ನೇನ್ಮಾಡಾಳು ಪಾಪ! ಮೊದಲು ವಾಪಸ್ ಕೊಡ್ರಿ!

## ಬಹುಮಾನಿತ ಪ್ರಶ್ನೆ

ಪಿ.ಜಿ.ರಾಘವೇಂದ್ರ, ಮೈಸೂರು
*ದ್ವಾಪರಯುಗದ ಜೂಜಿಗೂ, ಕಲಿಯುಗದ ಬಾಜಿಗೂ ಏನು ವ್ಯತ್ಯಾಸ?*
ಕಲಿಯುಗದಲ್ಲಿ ಹೆಂಡತಿಯನ್ನು ಪಣವಾಗಿರಿಸಿದರೆ ಗಂಡ ಎಣಿಸುವುದು ಹಣವಲ್ಲ, ಕಂಬಿ!

ಜೆ.ಸಿ.ಪ್ರದೀಪ್ ಕುಮಾರ್, ಹೂವಿನಹಡಗಲಿ
*ಎ.ಸಿ. ರೂಮಲ್ಲಿ ಕುಳಿತು ಕೆಲಸ ಮಾಡುವವರು ಬೆವರು ಸುರಿಸುವುದು ಯಾವಾಗ?*
ಕರೆಂಟ್ ಹೋದಾಗ, ರೈಡ್ ಆದಾಗ!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ಐಪಿಎಲ್ ಭ್ರಷ್ಟಾಚಾರದ ಬಗ್ಗೆ ನಿಮ್ಮ ಪ್ರಾಮಾಣಿಕ ಅಭಿಪ್ರಾಯವೇನು ರಾಂಜೀ?*
ತಪ್ಪೇನೂ ಇಲ್ಲ; ಐಪಿಎಲ್ ಎಂದರೆ ಇಂಡಿಯನ್ ಪಂಟರ್ಸ್ ಲೀಗ್ ಎಂದೇ ಅರ್ಥ!

ಮಹಾವೀರ ಕಾಸರ, ಶಿವಮೊಗ್ಗ
*ಸಾಲ ಕೊಟ್ಟವರ ಮೊಬೈಲ್ ನಂಬರಿಗೆ ಯಾವ ಸಂಕೇತ ಹಾಕಬೇಕು?*




ಕೋಡಂಗಿ!

ಮೊಳಕಾಲ್ಮೂರು ಸುರೇಶ್, ಬಳ್ಳಾರಿ
*ಕಾಲನ ಕರೆಗೆ ನೀವು ಸಿದ್ಧರಿದ್ದೀರಾ ಶ್ರೀರಾಮ್ ರವರೆ?*
ಸದ್ಯಕ್ಕೆ ಕಾಲಂನ ಕರೆಗಂತೂ ಸಿದ್ಧ!

ಎ.ವೈ. ರಾಧ, ಚೆನ್ನಂಗಿ
*ಎಲ್ಲಾ ಮಾಡುವುದು ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ. ಅದರ ಮೇಲೂ ಮಾಡುವುದು ಯಾರಿಗಾಗಿ...?*
ಹೊಡೆಯುವ ಲೊಟ್ಟೆಗಾಗಿ, ಬಣ್ಣದ ಚಿಟ್ಟೆಗಾಗಿ!

ಎನ್. ನಯನ್, ಶಿಡ್ಲಘಟ್ಟ
*ಮನಸ್ಸಿಗೆ ತೋಚಿದಂತೆ ಪ್ರೀತಿ ಮಾಡಿದರೆ ಜೀವನ ಹೇಗಿರತ್ತೆ?*
ಅರ್ಥಪರ್ಥವಿಲ್ಲದೆ ಅಲ್ಲೂ ಸಲ್ಲದ, ಇಲ್ಲೂ ಸಲ್ಲದ, ಇಂದಿನ ಕನ್ನಡ ಫಿಲ್ಮ್‌ಗಳಂತೆ!

■ ರಾಮ್